**ದಿನಾಂಕ 05.02.2019 ರಂದು ಸಮಯ 11.30 ಗಂಟೆಗೆ ವಾರ್ಡ್ 162-ಗಿರಿನಗರ ವಾರ್ಡಿಗೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದ ಉದ್ಯಾನವನದಲ್ಲಿ, ಗಿರಿನಗರ, ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದವರು**

1.ಶ್ರೀಮತಿ ನಂದಿನಿ ವಿಜಯ್ ವಿಠಲ್, ಪಾಲಿಕೆ ಸದಸ್ಯರು – ಅಧ್ಯಕ್ಷರು
2.ಶ್ರೀಮತಿ ಸೂರ್ಯ ಕುಮಾರಿ, ಸಹಾಯಕ ಕಂದಾಯ ಅಧಿಕಾರಿ, ಗಿರಿನಗರ- ಕಾರ್ಯದರ್ಶಿ
3.ಶ್ರೀಮತಿ ಮಂಜುಳ ಮಹದೇವ್- ಸದಸ್ಯರು
4.ಶ್ರೀಮತಿ. ಪುಷ್ಪ-ಸದಸ್ಯರು
5.ಶ್ರೀ ಎಸ್.ಎಂ.ಆರ್.ಪ್ರಸಾದ್-ಸದಸ್ಯರು
6.ಶ್ರೀ ಶ್ರೀನಿವಾಸ್ ಎಲ್.ಕೆ.-ಸದಸ್ಯರು

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಸಮಿತಿ ಸಭೆಯ ಅದ್ಯಕ್ಷರು, ವಾರ್ಡ್ ಸಮಿತಿ ಸಧಸ್ಯರು, ಅಧಿಕಾರಿಗಳು ಮತ್ತು ನೆರೆದಿದ್ದ ಸಾರ್ವಜನಿಕರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಅಧ್ಯಕ್ಷರು, ಸ್ಥಳಿಯ ಪಾಲಿಕೆ ಸದಸ್ಯರ ಆದೇಶದ ಮೇರೆಗೆ ಸದರಿ ಸಭೆಯನ್ನು ಪ್ರತಿ ತಿಂಗಳ ಮೊದಲನೆ ಶನಿವಾರ ನಡೆಸಬೇಕೆಂದು ತಿಳಿಸಿರುವ ಮೇರೆಗೆ ದಿನಾಂಕ 05.02.2019 ರಂದು ವಾರ್ಡ್ ಕಮೀಟಿ ಸಭೆನೆಡೆಸಲಾಗಿದೆಯಂದು ಕೋರುತ್ತಾ ಸಭೆಯಲ್ಲಿ ಬಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1. ಶ್ರೀ ಎಂ.ಎಸ್.ಆರ್.ಪ್ರಸಾದ್ ರವರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರು ಎಷ್ಟು ಜನ ಇದ್ದಾರೆ, ಎಷ್ಟು ಜನರನ್ನು ತೆಗೆದುಹಾಕ್ಕಿದ್ದಾರೆ, ಒಬ್ಬ ಮಹಿಳೆಯನ್ನು ಜನ್ಮ ದಿನಾಂಕದ ಆಧಾರದ ಮೇಲೆ ಕೆಲಸದ ತೆಗೆದುಹಾಕಿರುವುದಕ್ಕೆ ಸೂಕ್ತ ಕಾರಣ ನೀಡುವ ಬಗ್ಗೆ, ಗುತ್ತಿಗೆ ಆಧಾರದ ಮೇಲೆ ಆಟೋ ಟಿಪ್ಪರ್ ಕಸದ ಗಾಡಿಗಳು ಸರಿಯಾಗಿ ಬೀದಿ ಬೀದಿಗೆ ಬರದಿರುವ ಬಗ್ಗೆ, ಒಬ್ಬ ಪೌರ ಕಾರ್ಮಿಕರು ಒಂದೇ ಜಾಗದಲ್ಲಿ ಕೆಲಸ ಮಾಡಬಾರದೆಂದು ವಾರಕ್ಕೊಮ್ಮೆ ಸ್ಥಳ ಬದಲಾಯಿಸುವುದು ಅಥವಾ ಮೂರು ತಿಂಗಳಿಗೊಮ್ಮೆ ವರ್ಗಾವಣೆ ಮಾಡಬೇಕೆಂದು 700 ಜನಕ್ಕೆ ಒಬ್ಬ ಪೌರ ಕಾರ್ಮಿಕನಂತೆ ನೇಮಿಸಬೇಕು ಒಂದು ಪಕ್ಷ ಒಬ್ಬ ಪೌರ ಕಾರ್ಮಿಕರು ಮರಣ ಹೊಂದಿದರೆ ಸದರಿಯವರ ಸ್ಥಳಕ್ಕೆ ಮತ್ತೊಬ್ಬರನ್ನು ನೇಮಿಸಬೇಕು ಎಂಬುದರ ಬಗ್ಗೆ ಮಾನ್ಯ ಅಧ್ಯಕ್ಷರನ್ನು ಕೋರಿರುತ್ತಾರೆ.

   **ಕ್ರಮ:-ಪರಿಸರ ಅಧಿಕಾರಿಗಳು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಸವನಗುಡಿರವರಿಗೆ,**

   ಈ ವಿಷಯವಾಗಿ ವಾರ್ಡ್ ಸಂಖ್ಯೆ 162ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರು ಎಷ್ಟು ಜನ ಇದ್ದಾರೆ, ಎಷ್ಟು ಜನರನ್ನು ತೆಗೆದುಹಾಕ್ಕಿದ್ದಾರೆ, ಒಬ್ಬ ಮಹಿಳೆಯನ್ನು ಜನ್ಮ ದಿನಾಂಕದ ಆಧಾರದ ಮೇಲೆ ಕೆಲಸದಿಂದ ತೆಗೆದುಹಾಕಿರುವುದಕ್ಕೆ ಸೂಕ್ತ ಕಾರಣ ನೀಡುವ ಬಗ್ಗೆ, ಗುತ್ತಿಗೆ ಆಧಾರದ ಮೇಲೆ ಆಟೋ ಟಿಪ್ಪರ್ ಕಸದ ಗಾಡಿಗಳು ಸರಿಯಾಗಿ ಬೀದಿ ಬೀದಿಗೆ ಬರದಿರುವ ಬಗ್ಗೆ, ಒಬ್ಬ ಪೌರ ಕಾರ್ಮಿಕರು ಒಂದೇ ಜಾಗದಲ್ಲಿ ಕೆಲಸ ಮಾಡಬಾರದೆಂದು ವಾರಕ್ಕೊಮ್ಮೆ ಸ್ಥಳ ಬದಲಾಯಿಸುವುದು ಅಥವಾ ಮೂರು ತಿಂಗಳಿಗೊಮ್ಮೆ ವರ್ಗಾವಣೆ ಮಾಡಬೇಕೆಂದು 700 ಜನಕ್ಕೆ ಒಬ್ಬ ಪೌರ ಕಾರ್ಮಿಕನಂತೆ ನೇಮಿಸಬೇಕು ಒಂದು ಪಕ್ಷ ಒಬ್ಬ ಪೌರ ಕಾರ್ಮಿಕರು ಮರಣ ಹೊಂದಿದರೆ ಸದರಿಯವರ ಸ್ಥಳಕ್ಕೆ ಮತ್ತೊಬ್ಬರನ್ನು ನೇಮಿಸಬೇಕು ಎಂಬುದರ ಬಗ್ಗೆ ಪರಿಸರಾಧಿಕಾರಿ, ಬಸವನಗುಡಿರವರಿಗೆ ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಲಾಗಿರುತ್ತದೆ.

2. ಶ್ರೀ.ಶ್ರೀನಿವಾಸ್‌ರವರು ಪುಷ್ಪಾಂಜಲಿ ಪಾರ್ಕ್, ಮೈದಾನದಲ್ಲಿ ಕಸದ ರಾಶಿ ಬಿದ್ದಿದ್ದು ಹಾಗೂ 19ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್, ಗಣಪತಿ ದೇವಸ್ತಾನದ ಹತ್ತಿರ ಕಸದ ರಾಶಿ ಬಿದ್ದಿದ್ದುಮ ಸದರಿ ಕಸವನ್ನು ತೆರವುಗೊಳಿಸಲು ಕೋರಿರುತ್ತಾರೆ.

ಕಾರ್ಯದರ್ಶಿ ಕಛೇರಿ A V Nandini ಮಾಹಿತಿ ಸಂತ್ರ ಶಾಖೆ

ಕ್ರಮ ಸಂಖ್ಯೆ 103

ದಿನಾಂಕ 21-02-19

ಕ್ರಮ:-ಪರಿಸರ ಅಧಿಕಾರಿಗಳು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಸವನಗುಡಿರವರಿಗೆ,

ಈ ವಿಷಯವಾಗಿ ಪುಷ್ಪಾಂಜಲಿ ಪಾರ್ಕ್, ಮೈದಾನದಲ್ಲಿ ಕಸದ ರಾಶಿ ಬಿದ್ದಿದ್ದು ಹಾಗೂ 19ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್, ಗಣಪತಿ ದೇವಸ್ತಾನದ ಹತ್ತಿರ ಕಸದ ರಾಶಿ ಬಿದ್ದಿದ್ದು ಸದರಿ ಕಸವನ್ನು ತುರ್ತಾಗಿ ತೆರವುಗೊಳಿಸಲು ಪರಿಸರಾಧಿಕಾರಿಗಳು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಸವನಗುಡಿರವರಿಗೆ ಮಾನ್ಯ ಅಧ್ಯಕ್ಷರು ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ.

3.ಶ್ರೀಮತಿ.ಪುಷ್ಪರವರು ಆಲದ ಮರದ ಗಣಪತಿ ದೇವಸ್ಥಾನದ ಹಿಂಬಾಗ 19ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್ ಇಲ್ಲಿ ಪುಂಡ ಹುಡುಗರು ಸೇರಿ ಪ್ರತಿ ಶನಿವಾರ ಮತ್ತು ಭಾನುವಾರದಂದು ದುಮಪಾನ ಮತ್ತು ಮಧ್ಯಪಾನ ಮಾಡುತ್ತಿರುತ್ತಾರೆಂದು ತಿಳಿಸಿರುತ್ತಾರೆ.

ಕ್ರಮ:-ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಗಿರಿನಗರರವರಿಗೆ.

ಈ ವಿಷಯವಾಗಿ ಶ್ರೀಮತಿ.ಪುಷ್ಪ, ಸದಸ್ಯರವರು ತಿಳಿಸಿರುವ ಆಲದ ಮರದ ಗಣಪತಿ ದೇವಸ್ಥಾನದ ಹಿಂಬಾಗ 19ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್ ಇಲ್ಲಿ ಪುಂಡ ಹುಡುಗರು ಸೇರಿ ಪ್ರತಿ ಶನಿವಾರ ಮತ್ತು ಭಾನುವಾರದಂದು ದುಮಪಾನ ಮತ್ತು ಮಧ್ಯಪಾನ ಮಾಡುತ್ತಿರುತ್ತಾರೆಂದು ಸದರಿ ಜಾಗದಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾವನ್ನು ಅಳವಡಿಸಲು ಮಾನ್ಯ ಅಧ್ಯಕ್ಷರು ಪೋಲೀಸ್ ಸಿಬ್ಬಂದಿರವರಿಗೆ ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ.

4.ಶ್ರೀಮತಿ.ಪುಷ್ಪರವರು 50 ಅಡಿರಸ್ತೆ, ಮುನೇಶ್ವರ ಬ್ಲಾಕ್ ಹತ್ತಿರ ಬಾರ್ ಆಂಡ್ ರೆಸ್ಟುರೆಂಟ್ ಇರುವುದರಿಂದ ಅಲ್ಲಿಗೆ ಬರುವ ಗ್ರಾಹಕರು ರಸ್ತೆಯಲ್ಲಿ ವಾಹನಗಳನ್ನು ಸುಗಮವಾಗಿ ಸಂಚರಿಸಲು ಸಾಧ್ಯವಾಗದೇ ಟ್ರಾಫಿಕ್ ಜಾಮ್ ಆಗುತ್ತದೆಂದು ತಿಳಿಸಿರುತ್ತಾರೆ.

ಕ್ರಮ:-ಸಂಚಾರಿ ಪೋಲೀಸ್ ಇನ್ಸ್‌ಪೆಕ್ಟರ್, ಗಿರಿನಗರರವರಿಗೆ.

ಈ ವಿಷಯವಾಗಿ ಶ್ರೀಮತಿ.ಪುಷ್ಪ, ಸದಸ್ಯರವರು ತಿಳಿಸಿರುವ 50 ಅಡಿರಸ್ತೆ, ಮುನೇಶ್ವರ ಬ್ಲಾಕ್ ಹತ್ತಿರ ಬಾರ್ ಆಂಡ್ ರೆಸ್ಟುರೆಂಟ್ ಇರುವುದರಿಂದ ಅಲ್ಲಿಗೆ ಬರುವ ಗ್ರಾಹಕರು ರಸ್ತೆಯಲ್ಲಿ ವಾಹನಗಳನ್ನು ಸುಗಮವಾಗಿ ಸಂಚರಿಸಲು ಸಾಧ್ಯವಾಗದೇ ಟ್ರಾಫಿಕ್ ಜಾಮ್ ಆಗುತ್ತರಿತದೆಂದು ಸಂಚಾರಿ ಪೋಲೀಸ್ ಸಿಬ್ಬಂದಿರವರು ತಕ್ಷಣವೇ ಕ್ರಮಕೈಗೊಳುತ್ತೆವೆಂದು ಸಂಚಾರಿ ಪೋಲೀಸ್ ಸಿಬ್ಬಂದಿರವರಿಗೆ ಮಾನ್ಯ ಅಧ್ಯಕ್ಷರು ತಿಳಿಸಿದ್ದು, ಪೊಲೀಸ್ ಸಿಬ್ಬಂದಿರವರು ಕೂಡಲೇ ಕ್ರಮಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಿರುತ್ತಾರೆ.

5.ಶ್ರೀ.ಶ್ರೀನಿವಾಸ್‌ರವರು 14ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್‌ರಲ್ಲಿ ಕೋಳಿ ಮಾರಟ ಮಳಿಗೆ 5ನೆ ಮುಖ್ಯರಸ್ತೆ ರಾಘವೆಂದ್ರ ಬ್ಲಾಕ್‌ರಲ್ಲಿ ಮೀನು ಮಾರಾಟ ಮಳಿಗೆ ಹಾಗು ಬಿ.ಡಿ.ಎ. ಪಾರ್ಕ್ ಎದುರು ಉಟದ ಅಂಗಡಿಗಳನ್ನು ಇಟ್ಟುಕೊಂಡಿದ್ದು, ಉಟ್ಟದಿಂದ ಮಿಕ್ಕ ಅನ್ನವನ್ನು ಮೋರಿಗೆ ಹಾಕುತಿರುವುದರಿಂದ ವಾಸನೆ ಬರುತ್ತಿರುತ್ತದೆ ಎಂದು ತಿಳಿಸಿರುತ್ತಾರೆ.

ಕ್ರಮ:-ಆರೋಗ್ಯ ಪರಿವೀಕ್ಷಕರು, ಗಿರಿನಗರರವರಿಗೆ.

ಈ ವಿಷಯವಾಗಿ 14ನೇ ಮುಖ್ಯರಸ್ತೆ ಮುನೇಶ್ವರ ಬ್ಲಾಕ್‌ರಲ್ಲಿ ಕೋಳಿ ಮಾರಟ ಮಳಿಗೆ 5ನೆ ಮುಖ್ಯರಸ್ತೆ ರಾಘವೆಂದ್ರ ಬ್ಲಾಕ್‌ರಲ್ಲಿ ಮೀನು ಮಾರಾಟ ಮಳಿಗೆ ಹಾಗು ಬಿ.ಡಿ.ಎ. ಪಾರ್ಕ್ ಎದುರು ಉಟದ ಅಂಗಡಿಗಳನ್ನು ಇಟ್ಟುಕೊಂಡಿದ್ದು, ಉಟ್ಟದಿಂದ ಮಿಕ್ಕ ಅನ್ನವನ್ನು ಮೋರಿಗೆ ಹಾಕುತಿರುವುದರಿಂದ ವಾಸನೆ ಬರುತ್ತಿರುವುದಾಗಿ ಕೂಡಲೇ ಕ್ರಮಕೈಗೊಳ್ಳಲು ಮಾನ್ಯ ಅಧ್ಯಕ್ಷರು ಮಾನ್ಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದ್ದು, ಆರೋಗ್ಯ ಪರಿವೀಕ್ಷಕರು ಸ್ವಚ್ಚತೆಯನ್ನು ಕಾಪಾಡುವ ಬಗ್ಗೆ ಅಂಗಡಿ ಮಾಲೀಕರಿಗೆ ತಿಳಿಸುವುದಾಗಿ ಹಾಗೂ ಬಿ.ಡಿ.ಎ. ಪಾರ್ಕ್ ಹತ್ತಿರ ಉಟದಿಂದ ಮಿಕ್ಕ ಅನ್ನವನ್ನು ಮೋರಿಗೆ ಹಾಕುತಿರುವ ಪ್ರದೇಶವು ವಿಜಯನಗರ ಆರೋಗ್ಯಾಧಿಕಾರಿರವರ ವ್ಯಾಪ್ತಿಗೆ ಒಳಪಡುವುದರಿಂದ ಸದರಿ ಆರೋಗ್ಯ ಪರಿವೀಕ್ಷಕರಿಗೆ ದೂರವಾಣಿ ಮುಖಾಂತರ ತಿಳಿಸುವುದಾಗಿ ಈ ಮೂಲಕ ತಿಳಿಸಿರುತ್ತಾರೆ.

6.ಶ್ರೀ.ಶ್ರೀನಿವಾಸ್‌ರವರು 20ನೇ ಮುಖ್ಯರಸ್ತೆ ಟಿ ಬ್ಲಾಕ್ ಗಿರಿನಗರರಲ್ಲಿ ಅಕ್ಕಪಕ್ಕದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ 3 ತಿಂಗಳಿನಿಂದ ಸಾರಿಯಾಗಿ ನೀರು ಬರುತ್ತಿರುವುದಿಲ್ಲವೆಂದು ಹಾಗೂ ಮಳೆ ಬಂದಾಗ ಮಳೆ ನೀರಿ ಹಿರುವ ಇಳುಗುಂಡಿ ಮಾಡಬೇಕೆಂದು ತಿಳಿಸಿರುತ್ತಾರೆ.

<u>ಕ್ರಮ:-ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರಿಗೆ.</u>

ಈ ವಿಷಯವಾಗಿ 20ನೇ ಮುಖ್ಯರಸ್ತೆ ಟಿ ಬ್ಲಾಕ್ ಗಿರಿನಗರರಲ್ಲಿ ಅಕ್ಕಪಕ್ಕದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ 3 ತಿಂಗಳಿನಿಂದ ಸಾರಿಯಾಗಿ ನೀರು ಬರುತ್ತಿರುವುದಿಲ್ಲವೆಂದು ತಿಳಿಸಿರುವ ಮೇರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರಿಗೆ <u>ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ ಹಾಗೂ</u> ಮಳೆ ಬಂದಾಗ ಮಳೆ ನೀರಿ ಹಿರುವ ಇಳುಗುಂಡಿ ಮಾಡಬೇಕೆಂದು ಕಿರಿಯ ಅಭಿಯಂತರರು, ಬಿ.ಬಿ.ಎಂ.ಪಿ.ರವರಿಗೆ ಮಾನ್ಯ ಅಧ್ಯಕ್ಷಕರು ತಿಳಿಸಿರುತ್ತಾರೆ.

7.ಶ್ರೀ.ಎಸ್.ಎಂ.ಆರ್.ಪ್ರಸಾದ್‌ರವರು ಹೊಸಕೆರೆಹಳ್ಳಿ ಕ್ರಾಸ್ ಪಾರ್ಕ್ ಹತ್ತಿರ ಹಾಗೂ ಕತ್ತರಿಗುಪ್ಪೆ ವಾಟರ್ ಟ್ಯಾಂಕ್ ಪಾರ್ಕ್ ಪಾದಚಾರಿ ಮೇಲೆ ಕಲ್ಲಂಗಡಿ ಹಣ್ಣು ಮಾರಾಟ ಮಾಡಲು ಅವಕಾಶವಿದೆಯೇ? ಅವಕಾಶವಿಲ್ಲದಿದ್ದ ಪಕ್ಷದಲ್ಲಿ ಸದರಿ ಮಾರಾಟಗಾರರನ್ನು ತೆರವುಗೊಳಿಸಲು ಹಾಗೂ ಪುಟ್‌ಪಾತ್‌ನಲ್ಲಿ ವಾಹನ ನಿಲ್ಲಿಸಿರುತ್ತಾರೆ ಹಾಗೂ ಧರನೇಶ್ ಮನೆಯ ಮುಂದೆ ಹಳ್ಳ ಬಿದಿರುವುದಾಗಿ ಹಾಗೂ 50 ಅಡಿರಸ್ತೆ ಅಯ್ಯಪ್ಪ ದೇವಸ್ತಾನದ ಹತ್ತಿರ ಪಾಟ್‌ಗಳನ್ನು ಇಟ್ಟುಕೊಂಡಿರುವುದರಿಂದ ಸಾರ್ವಜನಿಕರಿಗೆ ಒಡಾಡಲು ತೊಂದರೆಯಾಗುತ್ತದೆಂದು ತಿಳಿಸಿರುತ್ತಾರೆ.

<u>ಕ್ರಮ:-ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರು ರವರಿಗೆ.</u>

ಈ ವಿಷಯವಾಗಿ ಹೊಸಕೆರೆಹಳ್ಳಿ ಕ್ರಾಸ್ ಪಾರ್ಕ್ ಹತ್ತಿರ ಹಾಗೂ ಕತ್ತರಿಗುಪ್ಪೆ ವಾಟರ್ ಟ್ಯಾಂಕ್ ಪಾರ್ಕ್ ಹತ್ತಿರ ಪಾದಚಾರಿ ಮೇಲೆ ಕಲ್ಲಂಗಡಿ ಹಣ್ಣು ಮಾರಾಟ ಮಾಡಲು ಅವಕಾಶವಿದೆಯೇ? ಅವಕಾಶವಿಲ್ಲದಿದ್ದ ಪಕ್ಷದಲ್ಲಿ ಸದರಿ ಮಾರಾಟಗಾರರನ್ನು ತೆರವುಗೊಳಿಸಲು ಆರೋಗ್ಯ ಹಾಗೂ ಪುಟ್‌ಪಾತ್‌ನಲ್ಲಿ ವಾಹನ ನಿಲ್ಲಿಸಿರುತ್ತಾರೆ ಹಾಗೂ ಧರನೇಶ್ ಮನೆಯ ಮುಂದೆ ಹಳ್ಳ ಬಿದಿರುವುದಾಗಿ ಹಾಗೂ 50 ಅಡಿರಸ್ತೆ ಅಯ್ಯಪ್ಪ ದೇವಸ್ತಾನದ ಹತ್ತಿರ ಪಾಟ್‌ಗಳನ್ನು ಇಟ್ಟುಕೊಂಡಿರುವುದರಿಂದ ಸಾರ್ವಜನಿಕರಿಗೆ ಒಡಾಡಲು ತೊಂದರೆಯಾಗುತ್ತದೆಂದು ತಿಳಿಸಿರುವ ಮೇರೆಗೆ ತಕ್ಷಣವೇ ಕ್ರಮಕೈಗೊಳಲು ಕಿರಿಯ ಅಭಿಯಂತರರು, ಗಿರಿನಗರರವರಿಗೆ ತಿಳಿಸಿರುತ್ತಾರೆ.

ಅಧ್ಯಕ್ಷರು ಮಾತನಾಡಿ ಈ ಸಭೆಯಲ್ಲಿ ವಾರ್ಡಿನ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಮ್ಮೇಲರ ಸಲಹೆ ಸೂಚನೆಗಳನ್ನು ನೀಡಿ ವಾರ್ಡಿನ ಅಭಿವೃದ್ಧಿಗಾಗಿ ಶ್ರಮಿಸೋಣ ಎಂಬುದಾಗಿ ಸಭೆಗೆ ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

A.V. Nandini

ವಾರ್ಡ್ ಸಮಿತಿ ಅಧ್ಯಕರು ಹಾಗೂ
ಪಾಲಿಕೆ.ಸದಸ್ಯರು, 162-ಗಿರಿನಗರ
ಬಿ.ಬಿ.ಎಂ.ಪಿ. ಸದಸ್ಯರು
ಗಿರಿನಗರ ವಾರ್ಡ್ – 162
ಮೊ: 9108450599

ಪ್ರತಿಯನ್ನು:

1) ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ,
2) ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ,
3) ವಾರ್ಡ್ 162ರ ವಾರ್ಡ್ ಸಮಿತಿ ಸಧಸ್ಯರುಗಳಿಗೆ,
4) ಸಂಬಂಧಪಟ್ಟ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ,
5) ಕಛೇರಿ ಕಡತಕ್ಕೆ.